ಅರಣ್ಯ ಕೈಗಾರಿಕ ನಿಗಮವು ಅರಣ್ಯ ಇಲಾಖೆಗೆ ಪಾಲಿಥಿನ್ ಚೀಲಗಳನ್ನು ಸರಬರಾಜು ಮಾಡುತ್ತಿರುವ ಬಗ್ಗೆ

3668 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಅರಣ್ಯ ಇಲಾಖೆಗೆ ಸಸಿಗಳನ್ನು ಬೆಳೆಸಲು ಪಾಲಿಥಿನ್ ಚೀಲಗಳನ್ನು ಸರಬರಾಜು ಮಾಡುತ್ತಿರುವುದು ನಿಜವೇ?*

ಆ) *ಜಿಲ್ಲಾ ಪರಿಷತ್‌ಗಳು ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಸ್ಥಳೀಯವಾಗಿ ಪಾಲಿಥಿನ್ ಚೀಲಗಳನ್ನು ಹೆಚ್ಚಿನ ದರದಲ್ಲಿ ಖರೀದಿಸುತ್ತಿರುವುದು ನಿಜವೇ?*

ಇ) *ಜಿಲ್ಲಾ ಪರಿಷತ್‌ಗಳು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವನ್ನು ಬಿಟ್ಟು ಬೇರೆ ಕಡೆಗಳಿಂದ ಪಾಲಿಥಿನ್ ಚೀಲಗಳನ್ನು ಖರೀದಿಸುವುದನ್ನು ತಡೆಯುವುದಕ್ಕೆ ಮತ್ತು ನಿಗಮವನ್ನು ಬಲಪಡಿಸಲು ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೆ?*

ಶ್ರೀ ಈ.ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು):

ಅ) ಹೌದು.

ಆ) ಕೆಲವು ಸಂದರ್ಭದಲ್ಲಿ ಮಾತ್ರ ಜಿಲ್ಲಾ ಪರಿಷತ್‌ಗಳು ಸರಕು ಖರೀದಿ ಇಲಾಖೆಯ ಅಧಿಕೃತ ಘರ್ಮಗಳ ಮೂಲಕ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಬೆಲೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕ ನಿಗಮವು ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಇದೆ.

ಇ) ಹೌದು, ಈ ಬಗ್ಗೆ ಇತ್ತೀಚೆಗೆ ದಿನಾಂಕ 12-8-91ರಲ್ಲಿ ಸರ್ಕಾರ ಆದೇಶಸಂಖ್ಯೆ ಎಹೆಚ್‌ಎಫ್‌ಎಫ್ 18 ಎಫ್‌ಎಸಿ 91ನ್ನು ಹೊರಡಿಸಿದೆ. ಇದರ ಪ್ರಕಾರ ಶೇಕಡ 75ರಷ್ಟನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಮೂಲಕ ಮತ್ತು ಶೇಕಡ 25 ರಷ್ಟನ್ನು ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕಾ ನಿಗಮದ ಮೂಲಕವೇ ಖರೀದಿಸಬೇಕೆಂದು ನಿಗದಿಸಿ ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

1992-93 ರ ಅರಣ್ಯೀಕರಣದ ಬಗ್ಗೆ ಕ್ರಮಗಳು

3503 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ಮುಂದೆ ಮುಂದಿನ ವರ್ಷ 1992-93 ಅರಣ್ಯೀಕರಣದ ಬಗ್ಗೆ ಯೋಜನೆ ನಿಮಿತ್ತ ಕಾರ್ಯಕ್ರಮಗಳಿವೆಯೇ?*

ಆ) *ಇದರ ಬಗ್ಗೆ ಆಯವ್ಯಯ ಹಂಚಿಕೆ ಮಾಡಲಾಗಿದೆಯೇ?*

ಇ) *ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಗುರಿಯನ್ನು ಸಾಧಿಸಿದೆಯೇ?*

ಈ) *ಗುರಿಯನ್ನು ಸಾಧಿಸದೆ ಇರಲು ಕಾರಣವೇನು?*

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಹೌದು.

ಆ) ಹೌದು. 1992-93ನೇ ಸಾಲಿನ ತಾತ್ಕಾಲಿಕ ಆಯ್ಯವ್ಯಯ ಹಂಚಿಕೆಯ

೫) ಹೌದು. ಹೆಚ್ಚಿನ ಯೋಜನೆಗಳಲ್ಲಿ ಗುರಿ ಸಾಧನೆಯು ಶೇಕಡ 100ಕ್ಕಿಂತ ಹೆಚ್ಚಾಗಿರುತ್ತದೆ. ಕೆಲವು ಯೋಜನೆಗಳಡಿಯಲ್ಲಿ ಶೇಕಡ 80ರಿಂದ 100 ರೂಳಗೆ ಗುರಿಯನ್ನು ಸಾಧಿಸಲಾಗಿದೆ.

ಈ) ಕೆಲವು ಜಿಲ್ಲೆಗಳಲ್ಲಿ ಕಡಿಮೆ ಮಳೆ ಬಿದ್ದ ಕಾರಣ, ಮತ್ತು ಫಲಾನುಭವಿಗಳಿಂದ ಬೆಳೆಸಿದ ಸಸಿಗಳನ್ನು ಕಳಪೆ ಎಂದು ತಿರಸ್ಕರಿಸಿದ ಕಾರಣ ಗುರಿಯನ್ನು ಸಾಧಿಸಲಾಗಲಿಲ್ಲ. ಅಲ್ಲದೆ ಬೇಕಾದಷ್ಟು ಸಂಖ್ಯೆಯಲ್ಲಿ ಪಾಲಿಥಿನ್ ಚೀಲಗಳ ಸರಬರಾಜಿನಲ್ಲಿನ ಅಭಾವ ಕೂಡ ಕಾರಣವಾಗಿದೆ.

1992-93ನೇ ಸಾಲಿನ ಅಂದಾಜು ಅಯವ್ಯಯ ಪಟ್ಟಿ

ಕ್ರಮ ಸಂಖ್ಯೆ	ಯೋಜನೆ ಹೆಸರು		1992-93ನೇ ಸಾಲಿನ ತಾತ್ಕಾಲಿಕ ಅಯವ್ಯಯ ಹಂಚಿಕೆ	ಪರಾ
1.	2.		3.	4.
	<u>ರಾಜ್ಯವಲಯ ಯೋಜನೆಗಳು</u>			
1.	ಅರಣ್ಯ ಸಂಶೋಧನೆ		40.00	
2.	ಕಾರ್ಯ ಯೋಜನೆ, ಭೂಮಿತಿ ಮತ್ತು ಸಮೀಕ್ಷೆ		60.00	
3.	ಶ್ರೀಗಂಧದ ಪುನರುತ್ಪಾದನೆ		20.00	
4.	ಕ್ಷೀಣಿಕ ಅರಣ್ಯಗಳು		100.00	
5.	ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ		860.00	
6.	ವೆಸ್ಟನ್ ಗಾಟ್ ಪಾರೆಸ್ಟ್ರಿ ಮತ್ತು ಎನ್‌ವಿರಾನ್‌ಮೆಂಟ್ ಪ್ರಾಜೆಕ್ಟ್ (ಒಡಿಎ ಅಸಿಸ್ಟೆಡ್)			
7.	ವನ್ಯಪ್ರಾಣಿ ಯೋಜನೆ (ನೀಲಗಿರಿ ಬಯೋಸ್ಪಿಯರ್ ಬಿಟ್ಟು)		500.00	
8.	ಕ್ಷೀಣಿಕ ಅರಣ್ಯಗಳು ಅಭಿವೃದ್ಧಿ ಯೋಜನೆ, ಕೆಸಿಡಿಸಿ ಕೆಎಫ್‌ಡಿಸಿ, ಕೆಎಸ್‌ಎಫ್‌ಐಸಿ		25.00	

9.	ಸಾಮಾಜಿಕ ಅರಣ್ಯ ಯೋಜನೆ (ವಿಶ್ವಬ್ಯಾಂಕ್ ನೆರವು)		150.00	
10.	ಕೇಂದ್ರ ಪುರಸ್ಕೃತ ಬಯೊಟಿಕ್ ಇಂಟರ್‌ಫಿಯರೆನ್ಸ್		60.00	
11.	ಕೇಂದ್ರ ಪುರಸ್ಕೃತ ಮಾರ್ಡನ್ ಫಾರೆಸ್ಟ್ ಫೈರ್ ಕಂಟ್ರೋಲ್ ಮೆತೆಡ್		40.00	
12.	ಕೇಂದ್ರ ಪುರಸ್ಕೃತ ಪ್ರೊಟೆಕ್ಷನ್ ಸರ್ವೀಸ್ ಎಗೆನೆಸ್ಟ್ ಫಂಗಸ್ ಇನ್‌ಸೆಕ್ಟ್ ಡಿಸೀಸಸ್		500	
13.	ಕೇಂದ್ರ ಪುರಸ್ಕೃತ ಏರಿಯಾ ಓರಿಯೆಂಟೆಡ್ ಕಟ್ಟಿಗೆ ಮತ್ತು ಹುಲ್ಲು ಬೆಳೆಯುವ ಯೋಜನೆ		750.00	
14.	ವಿಶೇಷ ಘಟಕ ಯೋಜನೆ (ರಾಜ್ಯ)		120.00	
15.	ರಸ್ತೆಬದಿಯ ನೆಡುತೋಪು		50.00	
16.	ಕಟ್ಟಡಗಳು		50.00	
17.	ಬಂಜರು ಭೂಮಿ ಅಭಿವೃದ್ಧಿ ಯೋಜನೆ		452.00	
18.	ಕ್ರಿಯೇಷನ್ ಆಫ್ ಪ್ರೊಟೇಕ್ಷನ್ ಫಾರೆಸ್ಟ್ಸ್ ಅಂಡ್ ರೀಅರಗನೈಸೇಷನ್		120.00	
19.	ಭೂಸಾರ ಸಂರಕ್ಷಣ (ಅರಣ್ಯೀಕರಣ)		2.50	
20.	ಕೇಂದ್ರ ಪುರಸ್ಕೃತ ವಿಕೇಂದ್ರಕೃತ ಸಸ್ಯಕ್ಷೇತ್ರಗಳು ಬೆಂಗಳೂರು (ನಗರ)		6.00	
21.	ಶಾಲಾ ಸಸ್ಯಕ್ಷೇತ್ರಗಳು (ಬೆಂಗಳೂರು ನಗರ)		5.00	
22.	ಕಿರು ಅರಣ್ಯ ಉತ್ಪತ್ತಿ ನೆಡುತೋಪು (ಕೇಂದ್ರ ಪುರಸ್ಕೃತ)		50.00	
23.	ಕೇಂದ್ರ ಪುರಸ್ಕೃತ ಬೀಜ ಅಭಿವೃದ್ಧಿ ಯೋಜನೆ		50.00	

24.	ಕೇಂದ್ರ ಪುರಸ್ಕೃತ ವಿಮಾನದಿಂದ ಬೀಜ ಪ್ರಸಾರ		18.00	
25.	ವಿಲೇಜ್ ಫಾರೆಸ್ಟ್ ಕಮಿಟಿ		18.00	
26.	ಕ್ಲಂಪ್		703.00	
27.	ನೀಲಗಿರಿ ಭಯೋಸ್ಪಿಯರ್ ರಿಸರ್ವ್		42.00	
28.	ಗ್ರೀನಿಂಗ್ ಅಫ್ ಅರ್‌ಬನ್ ಏರಿಯಾಸ್		500.00	
	ಒಟ್ಟು		4790.50 ಲಕ್ಷಗಳು	
11.	ಜಿಲ್ಲಾ ಪರಿಷತ್ ಯೋಜನೆಗಳು			
1.	ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆ		1182.00	
2.	ಶಾಲಾ ಸಸ್ಯ ಕ್ಷೇತ್ರಗಳು		60.00	
3.	ಭೂಸಾರ ಸಂರಕ್ಷಣೆ (ಅರ್ಥೀಕರಣ)		140.00	
4.	ಕೇಂದ್ರ ಪುರಸ್ಕೃತ ನದಿ ಕಣಿವೆ ಯೋಜನೆ		50.00	
5.	ಕೇಂದ್ರ ಪುರಸ್ಕೃತ ವಿಕೇಂದ್ರಿಕೃತ ಸಸ್ಯ ಕ್ಷೇತ್ರಗಳು		240.00	
6.	ಪರಿಜನ ಉಪಯೋಜನ (ಕೇಂದ್ರ)		5.00	
7.	ಪರಿಜನ ವಿಶೇಷ ಘಟಕ ಯೋಜನೆ		20.00	
8.	ಕಟ್ಟಡಗಳು		25.00	
	ಒಟ್ಟು		1722.00	
	ಗ್ರಾಂಡ್ ಟೋಟಲ್		6512.50 ಲಕ್ಷಗಳು ಅಥವಾ 65.12 ಕೋಟಿ	